# ಖರ್ಜೂರ ಮರುಭೂಮಿಯ ಅಮೃತಫಲ



**ಖರ್ಜೂರ ಬರಿ ಹಣ್ಣೆ? ಹಣ್ಣಷ್ಟೇ ಅಲ್ಲ; ಅದೊಂದು ಸಂಸ್ಕೃತಿ. ಅರಬ್ ರಾಷ್ಟ್ರಗಳ ಜನ–ಜೀವನದೊಂದಿಗೆ ಗಾಢವಾಗಿ ಬೆಸೆದುಕೊಂಡಿರುವ ಖರ್ಜೂರದ ಲೋಕದಲ್ಲೊಂದು ಆಪ್ತ ವಿಹಾರ.**

**■ ರಹಮತ್ ತರೀಕೆರೆ**

ಖರ್ಜೂರವು ಬಾಲ್ಯದ ಅನೇಕ ನೆನಪುಗಳ ಜತೆಗೆ ಗಾಢವಾಗಿ ಬೆಸೆದುಕೊಂಡಿದೆ. ಹಜ್ ಯಾತ್ರೆ ಹೋದ ಬಂಧುಗಳು, ಖರ್ಜೂರವನ್ನೂ ಸೀಸೆಯಲ್ಲಿ ತಂದ ನೀರನ್ನೂ ಪ್ರಸಾದವಾಗಿ ಕೊಡುವುದು ಒಂದು ಪದ್ಧತಿ. ನಮಗೆ ಮೆಕ್ಕಾದ ಝುಂಝುಂ ಬಾವಿಯ ನೀರು, ನಮ್ಮೂರ ಬಾವಿ ನೀರಿಗಿಂತ ಬೇರೆ ಅನಿಸುತ್ತಿರಲಿಲ್ಲ. ಆದರೆ ಮಾಂಸಲ ಖಂಡವುಳ್ಳ, ಮೈಯೆಲ್ಲ ಸುಕ್ಕಾಗಿ ನಾರಿನ ಎಳೆಗಳಿಂದ ಮಾಡಿದ ಉಂಡೆಯಂತೆ ತೋರುವ ಖರ್ಜೂರವು ನಮಗೆ ಅರಿಯದ ಹೊಸ ರುಚಿಯಾಗಿ ಇರುತ್ತಿತ್ತು. ನಮ್ಮ ಸೀಮೆಯ ಮದುವೆಗಳಲ್ಲಿ ನಿಖಾ ಮುಗಿದ ಬಳಿಕ, ಕಲ್ಲುಸಕ್ಕರೆ ಬದಾಮಿಯ ಜೊತೆ ಖರ್ಜೂರವನ್ನು ಸಭೆಯ ಮೇಲೆ ಎರಚುವಾಗ, ಅದರ ಕ್ಯಾಚ್ ಹಿಡಿಯುವುದರಲ್ಲಿ ನಾವು ಪರಿಣತಿ ಪಡೆದಿದ್ದೆವು. ಮನೆಗಳಲ್ಲಿ ಹುಟ್ಟಿದ ಶಿಶುವಿಗೆ ಖರ್ಜೂರವನ್ನು ತೇದು ನೆಕ್ಕಿಸಲಾಗುತ್ತಿತ್ತು. ಶವಸಂಸ್ಕಾರಕ್ಕೆ ಬಂದವರಿಗೆ ಮರಳುವಾಗ ಖರ್ಜೂರ ಕೊಡಲಾಗುತ್ತಿತ್ತು. ರಂಜಾನಿನಲ್ಲಿ ಉಪವಾಸವನ್ನು ಖರ್ಜೂರ ಸೇವನೆಯ ಮೂಲಕ ಮುಕ್ತಾಯಗೊಳಿಸುವುದು ಪೈಗಂಬರ್ ಅವರು ಹಾಕಿಕೊಟ್ಟ ಮೇಲ್ಪಂಕ್ತಿ ಎಂದು ಅಮ್ಮ ಖರ್ಜೂರವನ್ನು ಕೊಡುತ್ತಿದ್ದಳು. ಅದು ಖರ್ಜೂರ ಗರಿಯ ಚಾಪೆಯಲ್ಲಿ ಸುತ್ತಿ ತಂದು ನಮ್ಮೂರ ಸಂತೆಯಲ್ಲಿ ಮಾರುತ್ತಿದ್ದ ಬೆಲ್ಲದಂತೆ ಸಿಹಿಯಾಗಿದ್ದ ಫಳಫಳಿಸುವ ಬೆಂಡ್‌ಖರ್ಜೂರ. ನಾವೆಲ್ಲ ಉಪವಾಸ ಮುರಿಯುವಾಗ ಕೈಯಲ್ಲಿ ಆ ಖರ್ಜೂರವನ್ನೂ ಜಾಮಿನಲ್ಲಿ ನೀರನ್ನೂ ಇಟ್ಟುಕೊಂಡು, ಸಂಜೆ ಆಗುವುದನ್ನೇ ಕಾಯುತ್ತಿದ್ದೆವು. ಹೀಗೆ ಹುಟ್ಟಿನಿಂದ ಶುರುವಾಗಿ ಮರಣದ ತನಕ ವಿದೇಶದಿಂದ ಬಂದ ಖರ್ಜೂರವು ಬಾಳಿನಲ್ಲಿ ಜೋಡಣೆಗೊಂಡಿತ್ತು.

ಆದರೆ ಖರ್ಜೂರದ ಮರವಾಗಲಿ ಅವುಗಳಲ್ಲಿರುವ ವಿವಿಧ ತಳಿಗಳಾಗಲಿ ನಮಗೆ ತಿಳಿದಿರಲಿಲ್ಲ. ಅದರ ಸೋದರನಾದ ಈಚಲುಹಣ್ಣು ಮಾತ್ರ ನಮಗೆ ಪರಿಚಿತವಾಗಿತ್ತು. ಅದನ್ನು ತಿಂದ ಬಳಿಕ ನಾವು ಬೀಜವನ್ನು ಹಿತ್ತಲಲ್ಲಿ ನೆಡುತ್ತಿದ್ದೆವು. ಅದು ಎಂದೂ ಮೊಳಕೆಯೊಡೆದು ಮೇಲೆ ಬರುತ್ತಿರಲಿಲ್ಲ.

ಖರ್ಜೂರದ ತೋಟಗಳನ್ನು ನೋಡುವ ನನ್ನ ಹಂಬಲ ಈಡೇರಿದ್ದು ನಾನು ಪ್ಯಾಲೆಸ್ತೈನ್, ಇರಾನ್, ಇರಾಕ್, ಅರೇಬಿಯಾ, ಜೋರ್ಡಾನ್, ಈಜಿಪ್ತ್ ಮೊದಲಾದ ಮರುಭೂಮಿ ದೇಶಗಳಿಗೆ ಹೋದಾಗ. ತಿಪಟೂರು ಭಾಗದ ತೆಂಗಿನತೋಟಗಳಂತೆ, ಈಶಾನ್ಯ ಭಾರತದಲ್ಲಿ ಬಿದಿರಿನಂತೆ ಖರ್ಜೂರವು ಅಲ್ಲಿ ಸರ್ವವ್ಯಾಪಿಯಾಗಿತ್ತು. ಅದನ್ನು ರಸ್ತೆಬದಿ ಸಾಲುಮರಗಳಾಗಿ, ಸಾರ್ವಜನಿಕ ಪಾರ್ಕುಗಳಲ್ಲಿ, ಮನೆಯ ಮುಂದೆ, ಸರ್ಕಾರಿ ಕಚೇರಿಗಳ ಎದುರು, ಮಸೀದಿಯ ಅಂಗಳದಲ್ಲಿ ಬೆಳೆಸಲಾಗಿತ್ತು. ಖರ್ಜೂರ ಮರವು ಮರುಭೂಮಿಯ ಕಲ್ಪವೃಕ್ಷವಾಗಿ, ಅರಬ್ಬರ ಸಂಸ್ಕೃತಿಯಲ್ಲಿ ಪ್ರಧಾನ ಸ್ಥಾನ ಪಡೆದಿತ್ತು.

ಅರಬ್ಬರ ಮದುವೆಗಳಲ್ಲಿ ಅತಿಥಿಗಳ ಮುಂದಿನ



ಕಚೇರಿ ಆವರಣದಲ್ಲಿ ಖರ್ಜೂರ ಮರ